# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ರಾಜ್ಯದ ಎಲ್ಲಾ ನದಿ ಕೊಳ್ಳದಲ್ಲಿ ಉಪಕೊಳ್ಳವಾರು ಕೈಗಾರಿಕೆ ಬಳಕೆಗಾಗಿ ಲಭ್ಯವಿರುವ ನೀರಿನ ಇಳುವರಿ ಅಧ್ಯಯನ ಕುರಿತು.

****

**ಓದಲಾಗಿದೆ:-**

(1) ಸರ್ಕಾರದ ಆದೇಶ ಸಂಖ್ಯೆ:ಜಸಂಇ 110 ಕೆಬಿಎನ್ 2008 ದಿನಾಂಕ: 10/06/2010.

(2) ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯ ಅ.ಟಿ. ಸಂಖ್ಯೆ:ಸಿಐ 260 ಎಸ್‌ಪಿಐ 2010, ದಿನಾಂಕ:25/06/2010.

(2) ಮುಖ್ಯ ಇಂಜಿನಿಯರ್, ಜಲಸಂಪನ್ಮೂಲ ಅಭಿವೃದ್ಧಿ ಸಂಸ್ಥೆ, ಬೆಂಗಳೂರು ಇವರ ಪತ್ರ ಸಂಖ್ಯೆ:ಜಸ/ಯೋಮತ/ತಾಸ-5/ಕೈಗಾರಿಕೆ/2010-11 ದಿನಾಂಕ:3/7/2010.

**ಪ್ರಸ್ತಾವನೆ:**

ಮೇಲೆ ಓದಲಾದ (1) ರ ಸರ್ಕಾರದ ಆದೇಶದಲ್ಲಿ ಕರ್ನಾಟಕ ರಾಜ್ಯದಲ್ಲಿ 3.6.2010 ಹಾಗೂ 4.6.2010 ರಂದು ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶ ಜರುಗಿದ್ದು, ಹಲವಾರು ಕೈಗಾರಿಕೆಗಳ ಹೂಡಿಕೆದಾರರೊಂದಿಗೆ ಕರ್ನಾಟಕ ರಾಜ್ಯ ಕೈಗಾರಿಕೆ ಹಾಗೂ ಇತರೆ ಇಲಾಖೆಯೊಂದಿಗೆ ಒಪ್ಪಂದ ಮಾಡಿಕೊಳ್ಳಲಾಗಿದ್ದು, ಈ ಸಂಬಂಧ ರಾಜ್ಯದ ಎಲ್ಲಾ ಕೊಳ್ಳದಲ್ಲಿ ಉಪಕೊಳ್ಳವಾರು ಕೈಗಾರಿಕೆ ಉಪಯೋಗಕ್ಕಾಗಿ ನೀರಿನ ಇಳುವರಿಯ ಬಗ್ಗೆ ಮಾಹಿತಿ ಪಡೆದುಕೊಳ್ಳುವುದು ಅತ್ಯಂತ ಅಗತ್ಯವಾಗಿದ್ದು, ಉಪಕೊಳ್ಳವಾರು ನೀರಾವರಿ ಅವಶ್ಯಕತೆಯ ಹಿತರಕ್ಷಣೆ ಮಾಡಿ, ಇತರ ಉಪಯೋಗಕ್ಕಾಗಿ ನೀರಿನ ಲಭ್ಯತೆ ಪರಿಶೀಲಿಸಿ ಮಾಹಿತಿ ಪಡೆದುಕೊಳ್ಳಲು ಶ್ರೀ ಡಿ.ಎಸ್.ದೇಸಾಯಿ, ನಿವೃತ್ತ ಕಾರ್ಯದರ್ಶಿಗಳು, ಲೋಕೋಪಯೋಗಿ ಇಲಾಖೆರವರ ಅಧ್ಯಕ್ಷತೆಯಲ್ಲಿ ಆರು ಜನ ತಾಂತ್ರಿಕ ಪರಿಣಿತರ ತಂಡವನ್ನು ರಚಿಸಲಾಗಿತ್ತು.

ಮೇಲೆ ಓದಲಾದ (2) ರ ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯ ಅನಧಿಕೃತ ಟಿಪ್ಪಣಿಯಲ್ಲಿ ನೀರಾವರಿ ಅವಶ್ಯಕತೆಯ ಹಿತರಕ್ಷಣೆ ಮಾಡಿ ಕೈಗಾರಿಕಾ ಉಪಯೋಗಕ್ಕಾಗಿ ನೀರಿನ ಲಭ್ಯತೆಯನ್ನು ಮಾಡಿಕೊಡುವ ತಾಂತ್ರಿಕ ಪರಿಣಿತರ ತಂಡಕ್ಕೆ ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ ತಾಂತ್ರಿಕ ನಿರ್ದೇಶಕರಾದ ಶ್ರಿ ಗುರುನಾಥ.ಎಸ್.ಕುಲಕರ್ಣಿ ರವರನ್ನು ಸಹ ಸದಸ್ಯರನ್ನಾಗಿ ಮಾಡಿಕೊಳ್ಳುವಂತೆ ಕೋರಿರುತ್ತಾರೆ.

ಮೇಲೆ ಓದಲಾದ (3) ರ ಪತ್ರದಲ್ಲಿ ಮುಖ್ಯ ಇಂಜಿನಿಯರ್, ಜಲಸಂಪನ್ಮೂಲ ಅಭಿವೃದ್ಧಿ ಸಂಸ್ಥೆ, ಇವರು ಅಗತ್ಯ ಮಾಹಿತಿಗಳನ್ನು ಸಂಬಂಧಪಟ್ಟ ಇಲಾಖೆಗಳಿಂದ ಹಾಗೂ ಎಲ್ಲಾ ಮುಖ್ಯ

1406/09-08/10

123

ಇಂಜಿನಿಯರುಗಳಿಂದ ಪಡೆಯಬೇಕಾಗಿದ್ದು, ಇದಕ್ಕಾಗಿ ಸಾಕಷ್ಟು ಕಾಲವಕಾಶ ಬೇಕಾಗಿರುವುದರಿಂದ ಸಮಿತಿಯು ಅಧ್ಯಯನ ನಡೆಸಿ ವರದಿ ಸಲ್ಲಿಸಲು ಸುಮಾರು 6 ತಿಂಗಳ ಕಾಲಾವಕಾಶ ನೀಡುವಂತೆ ಕೋರಿರುತ್ತಾರೆ.

ಸರ್ಕಾರವು ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂ: ಜಸಂಇ 110 ಕೆಬಿಎನ್ 2010, ಬೆಂಗಳೂರು, ದಿನಾಂಕ:04/08/2010**

ಮೇಲಿನ ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ,

(1) ಶ್ರೀ ಡಿ.ಎನ್.ದೇಸಾಯಿ ರವರ ಅಧ್ಯಕ್ಷತೆಯಲ್ಲಿ ರಚಿಸಲಾಗಿರುವ ಪರಿಣಿತರ ತಂಡಕ್ಕೆ ಇನ್ನು ಮೂರು ತಿಂಗಳ ಕಾಲಾವಕಾಶವನ್ನು ವಿಸ್ತರಿಸಲಾಗಿದೆ.

(2) ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯ ತಾಂತ್ರಿಕ ನಿರ್ದೇಶಕರಾದ ಶ್ರೀ ಗುರುನಾಥ.ಎಸ್.ಕುಲಕರ್ಣಿ ರವರನ್ನು ಪರಿಣಿತರ ತಂಡದ ಸಹ ಸದಸ್ಯರನ್ನಾಗಿ ನೇಮಿಸಿದೆ.

(3) ಸಮಿತಿಗೆ ತಗಲುವ ಖರ್ಚು-ವೆಚ್ಚಗಳನ್ನು ಕರ್ನಾಟಕ ನೀರಾವರಿ ನಿಗಮ ನಿಯಮಿತ ವತಿಯಿಂದ ಭರಿಸುವುದು ಎಂದು ಸರ್ಕಾರವು ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ
4/8/10
(ಐ.ಡಿ.ಧಮನ್)
ವಿಶೇಷ ಕರ್ತವ್ಯಾಧಿಕಾರಿ
ಜಲಸಂಪನ್ಮೂಲ ಇಲಾಖೆ(ಕೃಭಾಜನಿ)

**ಪ್ರತಿಯನ್ನು:**

1. ಮಹಾಲೇಖಪಾಲರು, (ಲೆಕ್ಕಪತ್ರ/ಲೆಕ್ಕ ಪರಿಶೋಧನೆ), ಕರ್ನಾಟಕ, ಬೆಂಗಳೂರು.
2. ಮಾನ್ಯ ಮುಖ್ಯಮಂತ್ರಿಯವರ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
3. ಮಾನ್ಯ ಜಲಸಂಪನ್ಮೂಲ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
4. ಪ್ರಧಾನ ಕಾರ್ಯದರ್ಶಿಗಳು, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ. ವಿಕಾಸಸೌಧ.
5. ಪ್ರಧಾನ ಕಾರ್ಯದರ್ಶಿಗಳು ಹಾಗೂ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಬೆಂಗಳೂರು.
6. ವ್ಯವಸ್ಥಾಪಕ ನಿರ್ದೇಶಕರು, ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ, ಬೆಂಗಳೂರು.
7. ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ, ಬೆಂಗಳೂರು.
8. ಮುಖ್ಯ ಇಂಜಿನಿಯರ್, ಜಲಸಂಪನ್ಮೂಲ ಅಭಿವೃದ್ಧಿ ಸಂಸ್ಥೆ, ಬೆಂಗಳೂರು (ಎಲ್ಲಾ ಸದಸ್ಯರಿಗೂ ಸರ್ಕಾರಿ ಆದೇಶವನ್ನು ಪತ್ರ ಮುಖೇನ ಕಳುಹಿಸುವುದು)
9. ಮುಖ್ಯ ಇಂಜಿನಿಯರ್, ಕೇಂದ್ರಿಯ ಯಾಂತ್ರಿಕ ಸಂಸ್ಥೆ ಮತ್ತು ಜಲ ವಿಜ್ಞಾನ, ಬೆಂಗಳೂರು.
10. ಶಾಖಾ ರಕ್ಷಕ ಕಡತ/ ಹೆಚ್ಚಿನ ಪ್ರತಿಗಳು.